# ಕರ್ನಾಟಕ ವಿಧಾನ ಸಭೆ

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 45(100) |
| ಸದಸ್ಯರ ಹೆಸರು | ಶ್ರೀ ಮಂಜುನಾಥ ಭಂಡಾರಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 09.12.2024 |
| ಉತ್ತರಿಸಬೇಕಾದ ಸಚಿವರು | ಮಾನ್ಯ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕರ್ನಾಟಕ ರಾಜ್ಯದಲ್ಲಿರುವ ಯಾವ ಯಾವ ಪ್ರಾಣಿ ಸಂಗ್ರಹಾಲಯಗಳನ್ನು Zoo Authority of Karnataka ಯೊಂದಿಗೆ ವಿಲೀನಗೊಳಿಸಲಾಗಿದೆ: | ಕರ್ನಾಟಕ ಮೃಗಾಲಯದ ಪ್ರಾಧಿಕಾರವು ರಾಜ್ಯ ಸರ್ಕಾರಿ ಸ್ವಾಮ್ಯದ ಸ್ವಾಯತ್ತ ಸಂಸ್ಥೆಯಾಗಿದ್ದು, ಕೆಳಕಂಡ ಮೃಗಾಲಯಗಳ ಆಡಳಿತಾತ್ಮಕ ನಿಯಂತ್ರಣವನ್ನು ಹೊಂದಿರುತ್ತದೆ:<br>1. ಶ್ರೀ ಚಾಮರಾಜೇಂದ್ರ ಮೃಗಾಲಯ , ಮೈಸೂರು.<br>2. ಬನ್ನೇರುಘಟ್ಟ ಜೈವಿಕ ಉದ್ಯಾನವನ, ಬೆಂಗಳೂರು.<br>3. ಶ್ರೀ ಅಟಲ್ ಬಿಹಾರಿ ವಾಜಪೇಯಿ ಜೂಯಲಾಜಿಕಲ್ ಪಾರ್ಕ್, ಕಮಲಾಪುರ, ವಿಜಯನಗರ.<br>4. ಮಕ್ಕಳ ಉದ್ಯಾನವನ ಮತ್ತು ಕಿರು ಮೃಗಾಲಯ, ಕಲ್ಬುರ್ಗಿ<br>5. ಇಂದಿರ ಪ್ರಿಯದರ್ಶಿನಿ ಪ್ರಾಣಿ ಸಂಗ್ರಹಾಲಯ, ದಾವಣಗೆರೆ<br>6. ಕಿತ್ತೂರು ರಾಣಿ ಚೆನ್ನಮ್ಮ ನಿಸರ್ಗಧಾಮದ ಕಿರು ಮೃಗಾಲಯ, ಭೂತರಾಮನಹಟ್ಟಿ, ಬೆಳಗಾವಿ<br>7. ಮಕ್ಕಳ ಉದ್ಯಾನವನ ಮತ್ತು ಕಿರು ಮೃಗಾಲಯ, ಬಿಂಕದಕಟ್ಟಿ, ಗದಗ<br>8. ಹುಲಿ ಮತ್ತು ಸಿಂಹಧಾಮ, ತ್ಯಾವರೆಕೊಪ್ಪ, ಶಿವಮೊಗ್ಗ.<br>9. ಮಕ್ಕಳ ಉದ್ಯಾನವನ ಹಾಗೂ ಕಿರು ಮೃಗಾಲಯ, ಆಡುಮಲ್ಲೇಶ್ವರ, ಚಿತ್ರದುರ್ಗ. |

| | | |
|---|---|---|
| ಆ) | ಮಂಗಳೂರಿನ ವಾಮಂಜೂರಿನಲ್ಲಿ ಡಾ: ಶಿವರಾಮ ಕಾರಂತ ಪಿಲಿಕುಳ ನಿಸರ್ಗಧಾಮದಲ್ಲಿ ಪ್ರಾಣಿ ಸಂಗ್ರಹಾಲಯ, ಸಸ್ಯಶಾಸ್ತ್ರೀಯ ಉದ್ಯಾನವನಗಳನ್ನು ಇಲ್ಲಿಯವರೆಗೆ ಯಾಕೆ ಉನ್ನತೀಕರಣ ಮಾಡಲಾಗಿರುವುದಿಲ್ಲ; ಇದನ್ನು ನಿರ್ವಹಣೆ ಮಾಡಲು ಪೂರ್ಣಕಾಲಿಕ ಅಧಿಕಾರಿಗಳು ಸಿಬ್ಬಂದಿಗಳು ಇದ್ದಾರೆಯೇ; ಈಗ ಇರುವ ಅಧಿಕಾರಿ ಸಿಬ್ಬಂದಿಗಳ ಸಂಖ್ಯೆ ಎಷ್ಟು; ಅವರಿಗೆ ಯಾವ ರೀತಿಯ ವೇತನ ಶ್ರೇಣಿಯನ್ನು ನಿಗದಿಪಡಿಸಲಾಗಿದೆ; | ಪಿಲಿಕುಳ ಜೈವಿಕ ಉದ್ಯಾನವನ ಮತ್ತು ಸಸ್ಯೋಧ್ಯಾನವನ್ನು ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರದ ಅನುದಾನದ ಲಭ್ಯತೆಗನುಗುಣವಾಗಿ ಹಂತ ಹಂತವಾಗಿ ಅಭಿವೃದ್ಧಿಪಡಿಸಲಾಗುತ್ತಿದೆ.<br><br>ಪಿಲಿಕುಳ ಜೈವಿಕ ಉದ್ಯಾನವನದ ನಿರ್ವಹಣೆಗೆ ಒಟ್ಟು 27 ಸಿಬ್ಬಂದಿಗಳು ಮತ್ತು ಸಸ್ಯಶಾಸ್ತ್ರೀಯ ವಿಭಾಗಕ್ಕೆ ಒಟ್ಟು 10 ಸಿಬ್ಬಂದಿಗಳು ಕಾರ್ಯ ನಿರ್ವಹಿಸುತ್ತಿದ್ದಾರೆ. ಸದರಿ ಸಿಬ್ಬಂದಿಗಳಿಗೆ ಹಿಂದಿನ ಪಿಲಿಕುಳ ನಿಸರ್ಗಧಾಮ ಸೊಸೈಟಿಯ ಹೆಚ್.ಆರ್.ಡಿ. ವರದಿಯಲ್ಲಿರುವಂತೆ ವೇತನ ಶ್ರೇಣಿಯನ್ನು ಹಾಗೂ ಹೊರಗುತ್ತಿಗೆ ಸಿಬ್ಬಂದಿಗಳಿಗೆ ಸರಕಾರವು ನಿಗಧಿಪಡಿಸಿರುವ ಕನಿಷ್ಠ ವೇತನವನ್ನು ನೀಡಲಾಗುತ್ತಿದೆ. ಈ ವಿಭಾಗಗಳನ್ನು ಇನ್ನೂ ಹೆಚ್ಚಿನ ರೀತಿಯಲ್ಲಿ ಉನ್ನತೀಕರಣಗೊಳಿಸುವ ವಿಚಾರವಾಗಿ ಪರಿಶೀಲಿಸಿ ಮುಂದಿನ ದಿನಗಳಲ್ಲಿ ಕ್ರಮ ವಹಿಸಲಾಗುವುದು. |
| ಇ) | ಪ್ರಾಣಿ ಸಂಗ್ರಹಾಲಯವನ್ನು ಉನ್ನತೀಕರಣ ಮಾಡುವ ಹಾಗೂ ಪ್ರಾಣಿಗಳನ್ನು ವಿನಿಮಯ ಮಾಡಿಕೊಳ್ಳುವ ಉದ್ದೇಶದಿಂದ Zoo Authority of Karnataka ದೊಂದಿಗೆ ವಿಲೀನಗೊಳಿಸಿ ಅಂತರಾಷ್ಟ್ರೀಯ ಮಟ್ಟದ ನಿಸರ್ಗಧಾಮವನ್ನಾಗಿ ಉನ್ನತೀಕರಣ ಮಾಡುವ ಬಗ್ಗೆ ಯಾವಾಗ ಕ್ರಮ ವಹಿಸಲಾಗುತ್ತಿದೆ; (ವಿವರ ನೀಡುವುದು); | ದೇಶದ ವಿವಿಧ ಮೃಗಾಲಯಗಳಿಂದ ಕೇಂದ್ರ ಮೃಗಾಲಯ ಪ್ರಾಧಿಕಾರದ ಅನುಮತಿ ಪಡೆದು ಹೊಸ ಪ್ರಾಣಿಗಳನ್ನು"Animal Exchange Program" ಮುಖಾಂತರ ತರಿಸಿಕೊಳ್ಳಲಾಗುತ್ತಿದೆ ಮತ್ತು ಪಿಲಿಕುಳ ಮೃಗಾಲಯದಲ್ಲಿರುವ ಹೆಚ್ಚುವರಿ ಪ್ರಾಣಿಗಳನ್ನು 2006 ನೇ ಸಾಲಿನಿಂದ ರವಾನಿಸಲಾಗುತ್ತಿದೆ.<br><br>ಇಲ್ಲಿ ಪಶ್ಚಿಮ ಘಟ್ಟದ ಪ್ರಾಣಿ, ಪಕ್ಷಿ ಮತ್ತು ಉರಗ ಪ್ರಭೇದಗಳಿಗೆ ಆದ್ಯತೆಯನ್ನು ನೀಡಲಾಗುತ್ತಿದೆ ಜೊತೆಗೆ ಅಂಗೀಕೃತ ಮಾಸ್ಟರ್ ಪ್ಲಾನ್‌ನಂತೆ ಎರಡನೇ ಆಧ್ಯತೆಯನ್ನು ಭಾರತದ ಪ್ರಾಣಿ, ಪಕ್ಷಿ ಮತ್ತು ಉರಗ ಪ್ರಭೇದಗಳಿಗೆ |

| | | |
|---|---|---|
| | | ನೀಡಲಾಗುತ್ತಿದೆ.<br><br>ಜೈವಿಕ ಉದ್ಯಾನವನವನ್ನು ಉನ್ನತೀಕರಣ ಮಾಡುವ ಬಗ್ಗೆ ಅನುದಾನದ ಲಭ್ಯತೆ ಮೇರೆಗೆ ರೂಪುರೇಷೆಯನ್ನು ತಯಾರಿಸಲಾಗುವುದು |
| ಇ) | ಪಿಲಿಕುಳ ನಿಸರ್ಗಧಾಮದ ಮೃಗಾಲಯ ಮತ್ತು ಸಸ್ಯೋದ್ಯಾನವನ್ನು ಆರ್ಥಿಕವಾಗಿ ಸ್ವಾವಲಂಬಿಯಾಗಿ ಸದೃಢವಾಗುವ ನಿಟ್ಟಿನಲ್ಲಿ ಪ್ರವಾಸಿಗರ ಸಂಖ್ಯೆ ಹೆಚ್ಚಿಸುವ ಸಹಿತ ಯಾವ ರೀತಿಯ ಕಾರ್ಯತಂತ್ರ ರೂಪಿಸಲಾಗುತ್ತಿದೆ? | ಪಿಲಿಕುಳ ನಿಸರ್ಗಧಾಮದ ಮೃಗಾಲಯವನ್ನು ಆರ್ಥಿಕವಾಗಿ ಸ್ವಾವಲಂಬಿಯಾಗಿ ಸದೃಢವಾಗುವ ನಿಟ್ಟಿನಲ್ಲಿ ಒರಿಸ್ಸಾ, ರಾಜಸ್ಥಾನ, ಗುಜರಾತ್, ಮಹಾರಾಷ್ಟ್ರ, ಪಂಜಾಬ್, ತಮಿಳುನಾಡು, ತೆಲಂಗಾಣ ಮತ್ತು ಆಂಧ್ರ ಪ್ರದೇಶದ ವಿವಿಧ ಮೃಗಾಲಯಗಳಿಂದ ಪ್ರಾಣಿ ವಿನಿಮಯ ಕಾರ್ಯಕ್ರಮದ ಒಪ್ಪಂದ ನಡೆಯುತ್ತಿದೆ ಮತ್ತು ಸಸ್ಯೋಧ್ಯಾನವನ್ನು ಆರ್ಥಿಕವಾಗಿ ಸ್ವಾವಲಂಬಿಯಾಗಿ ಸದೃಡವಾಗುವ ನಿಟ್ಟಿನಲ್ಲಿ ಕಸಿ ಗಿಡಗಳನ್ನು ಅಭಿವೃದ್ಧಿಪಡಿಸುವುದು, ಅಲಂಕಾರಿಕ ಸಸ್ಯಗಳ ಅಭಿವೃದ್ಧಿ, ಗ್ರೀನ್ ಹೌಸ್ ಸ್ಥಾಪನೆ, ಕಸಿ ಕಟ್ಟುವಿಕೆ ಬಗ್ಗೆ ಪ್ರಾತ್ಯಕ್ಷಿತೆ, ತರಬೇತಿ ಇತ್ಯಾದಿ ಕಾರ್ಯತಂತ್ರಗಳನ್ನು ಅನುದಾನದ ಲಭ್ಯತೆ ಮೇರೆಗೆ ರೂಪಿಸಲಾಗುವುದು. |

ಸಂಖ್ಯೆ: ಐಟಿಬಿಟಿ 272 ಎಸ್ ಟಿಎಸ್ 2024

(ಎನ್.ಎಸ್. ಭೋಸರಾಜು)
ಮಾನ್ಯ ಸಣ್ಣ ನೀರಾವರಿ,
ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು